**All India Radio: Bangalore**
**National Bulletin In Kannada**
**21.06.2026 9.05 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**21.06.2026 9.05 am**

**<>><><*><><<>**

ಮುಖ್ಯಾಂಶಗಳು

೧. ೧೨ನೇ ಅಂತಾರಾಷ್ಟ್ರೀಯ ಯೋಗದಿನ; ದೇಶ-ವಿದೇಶಗಳಲ್ಲಿ ಯೋಗ ಸಂಭ್ರಮ

೨. ವಿಶ್ವದ ಅತಿದೊಡ್ಡ ಸಾಮೂಹಿಕ ಹಬ್ಬವಾಗಿ ಅಂತಾರಾಷ್ಟ್ರೀಯ ಯೋಗ ದಿನ ಆಚರಣೆ - ಪ್ರಧಾನಮಂತ್ರಿ ನರೇಂದ್ರ ಮೋದಿ ಅಭಿಮತ

೩. ಇಂದು ನೀಟ್ ಯುಜಿ ಮರುಪರೀಕ್ಷೆ; ಸುಗಮ-ಪಾರದರ್ಶಕ ಪ್ರಕ್ರಿಯೆಗೆ ಎನ್‌ಟಿಎ ಸಂಪೂರ್ಣ ಸಿದ್ಧತೆ

೪. ಕೊಲ್ಕತ್ತಾದಲ್ಲಿ ಇಂದು ಸ್ವದೇಶಿ ನಿರ್ಮಿತ ಮೂರು ಯುದ್ಧನೌಕೆಗಳನ್ನು ಲೋಕಾರ್ಪಣೆಗೊಳಿಸಲಿರುವ ಪ್ರಧಾನಿ

೫. ಫಿಫಾ ವಿಶ್ವಕಪ್ ಫುಟ್ಬಾಲ್; ಐವರಿ ಕೋಸ್ಟ್ ವಿರುದ್ಧ ಜಯ ಗಳಿಸಿ, ನಾಕೌಟ್ ಹಂತಕ್ಕೇರಿದ ಜರ್ಮನಿ

**<>><><*><><<>**

ಇಂದು ಜಗತ್ತಿನಾದ್ಯಂತ ೧೨ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತಿದೆ. ಆರೋಗ್ಯಕರ, ಸಕ್ರಿಯ ಮತ್ತು ಘನತೆಯುಳ್ಳ ವಯೋವೃದ್ಧಿಗಾಗಿ ಯೋಗವನ್ನು ಜೀವನಪರ್ಯಂತದ ಅಭ್ಯಾಸವನ್ನಾಗಿ ಅಳವಡಿಸಿಕೊಳ್ಳುವುದರ ಮಹತ್ವವನ್ನು ಸಾರುವ 'ಆರೋಗ್ಯಕರ ವಯೋವೃದ್ಧಿಗಾಗಿ ಯೋಗ' ಎಂಬುದು ಈ ವರ್ಷದ ಘೋಷವಾಕ್ಯವಾಗಿದೆ. ಅಂತಾರಾಷ್ಟ್ರೀಯ ಯೋಗ ದಿನದ ಆಚರಣೆಯಿಂದಾಗಿ ಜೂನ್ ೨೧ರ ಈ ದಿನ, ವಿಶ್ವದ ಅತಿದೊಡ್ಡ ಸಾಮೂಹಿಕ ಹಬ್ಬದ ದಿನವಾಗಿ ಮಾರ್ಪಟ್ಟಿದೆ" ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಪಶ್ಚಿಮ ಬಂಗಾಳದ ಕೋಲ್ಕತ್ತಾದ ಐತಿಹಾಸಿಕ ರೆಡ್ ರೋಡ್‌ನಲ್ಲಿ ನಡೆದ ೧೨ನೇ ಅಂತಾರಾಷ್ಟ್ರೀಯ ಯೋಗ ದಿನದ ಪ್ರಧಾನ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ, ಯೋಗವು ಕೇವಲ ದೈಹಿಕ ಶ್ರಮದ ಸಾಧನವಲ್ಲ ಮತ್ತು ಇದು ಯಾವುದೇ ಒಂದು ವಯೋಮಾನಕ್ಕೆ ಸೀಮಿತವಾದುದಲ್ಲ, ಬದಲಿಗೆ ಅದು ಮಾನವ ಚೈತನ್ಯದ ಅಭಿವ್ಯಕ್ತಿಯಾಗಿದೆ ಎಂದು ತಿಳಿಸಿದರು. ೨೦ನೇ ವಯಸ್ಸಿಗಿಂತ ೪೦ರಲ್ಲಿ ಹೆಚ್ಚಿನ ದೈಹಿಕ ನಮ್ಯತೆಯನ್ನು ಹೊಂದುವುದು, ೩೦ನೇ ವಯಸ್ಸಿಗಿಂತ ೫೦ರಲ್ಲಿ ಹೆಚ್ಚು ಚೈತನ್ಯಪೂರ್ಣವಾಗಿರುವುದು ಹಾಗೂ ೫೦ರ ವಯಸ್ಸಿಗಿಂತ ೭೦ ರ ವಯಸ್ಸಿನಲ್ಲಿ ರೋಗರುಜಿನಗಳನ್ನು ತಡೆದುಕೊಳ್ಳುವ ಶಕ್ತಿಯೊಂದಿಗೆ ಸದೃಢ ದೇಹ ಹೊಂದುವ ಗುರಿಇಟ್ಟುಕೊಂಡಿರಬೇಕು ಎಂದು ಅವರು ಕರೆ ನೀಡಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೩೫ ಸೆಕೆಂಡ್ಸ್)

ಮಾನಸಿಕ ಆರೋಗ್ಯದ ಮೂಲಕ ದೈಹಿಕ ಸುಸ್ಥಿತಿಯನ್ನು ಕಂಡುಕೊಳ್ಳಲು ಮತ್ತು ಸಮತೋಲಿತ ಜೀವನ ನಡೆಸಲು ಯೋಗವು ಸಹಾಯ ಮಾಡುತ್ತದೆ. ಯೋಗವನ್ನು ಕೇವಲ ನಿರ್ದಿಷ್ಟ ಸಂದರ್ಭಗಳಿಗೆ ಮಾತ್ರ ಸೀಮಿತಗೊಳಿಸದೆ,

ಅದನ್ನು ಜೀವನದ ಅವಿಭಾಜ್ಯ ಅಂಗವಾಗಿಸಿಕೊಳ್ಳಬೇಕು ಎಂದು ಪ್ರಧಾನಿ ಒತ್ತಿಹೇಳಿದರು.  ಈ ನಿಟ್ಟಿನಲ್ಲಿ ಸರ್ಕಾರವು ೧೦೦ ದಿನಗಳ ಆನ್‌ಲೈನ್ ಯೋಗ ತರಗತಿಗಳ ಮೂಲಕ ಈ ವರ್ಷ 'ಯೋಗ ೩೬೫' ಎಂಬ ಘೋಷಣೆಯನ್ನು ಜನಪ್ರಿಯಗೊಳಿಸಿದೆ ಎಂದು ಅವರು ತಿಳಿಸಿದರು. ಬಳಿಕ ಪ್ರಧಾನಿ, ಯೋಗ ಶಿಷ್ಟಾಚಾರದಂತೆ ಕಾರ್ಯಕ್ರಮವನ್ನು ಮುನ್ನಡೆಸಿದರು. ಕಾರ್ಯಕ್ರಮದ ಸ್ಥಳದಲ್ಲಿ ಸಾವಿರಾರು ಯೋಗಾಸಕ್ತರು ಭಾಗವಹಿಸಿದ್ದರು. ಭಾರತ ಹಾಗೂ ವಿದೇಶಗಳಿಂದ ಲಕ್ಷಾಂತರ ನಾಗರಿಕರು ವರ್ಚುವಲ್ ಮೂಲಕ ಈ ಆಚರಣೆಯಲ್ಲಿ ಪಾಲ್ಗೊಂಡರು. ಆರೋಗ್ಯ, ಸೌಹಾರ್ದತೆ ಮತ್ತು ಸಾಮೂಹಿಕ ಯೋಗಕ್ಷೇಮವನ್ನು ಉತ್ತೇಜಿಸುವ ಜಾಗತಿಕ ಆಂದೋಲನವಾಗಿ ಯೋಗದ ಬೆಳೆಯುತ್ತಿರುವ ಪಾತ್ರವನ್ನು ಈ ಕಾರ್ಯಕ್ರಮ ಪುನರುಚ್ಚರಿಸಿದೆ. ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ, ಐತಿಹಾಸಿಕ ಹೆಗ್ಗುರುತುಗಳು ಮತ್ತು ಯೋಗ ಸಂಪ್ರದಾಯಗಳನ್ನು ಬೆಸೆಯುವ ನಿಟ್ಟಿನಲ್ಲಿ ಕೇಂದ್ರ ಸಂಸ್ಕೃತಿ ಸಚಿವಾಲಯ, ದೇಶದ ೧೦೦ ಪ್ರಮುಖ ಐತಿಹಾಸಿಕ ಸ್ಥಳಗಳಲ್ಲಿ ವಿಶೇಷ ಯೋಗ ಆಚರಣೆಗಳನ್ನು ಆಯೋಜಿಸಿದೆ. ಈ ಉಪಕ್ರಮದ ಭಾಗವಾಗಿ ನವದೆಹಲಿಯ ಕೆಂಪು ಕೋಟೆ, ಕರ್ನಾಟಕದ ಹಂಪಿ, ಉತ್ತರಾಖಂಡದ ಹರಿದ್ವಾರ, ಒಡಿಶಾದ ಕೊನಾರ್ಕ್, ತಮಿಳುನಾಡಿನ ಮಹಾಬಲಿಪುರಂ, ಮಹಾರಾಷ್ಟ್ರದ ಮುಂಬೈ, ಬಿಹಾರದ ನಾಲಂದಾ, ಗುಜರಾತ್‌ನ ಅಹಮದಾಬಾದ್, ಉತ್ತರ ಪ್ರದೇಶದ ಸಾರನಾಥ್, ಲಡಾಖ್‌ನ ಲೇಹ್, ತೆಲಂಗಾಣದ ಹೈದರಾಬಾದ್ ಮತ್ತು ಅಸ್ಸಾಂನ ಸಿಲ್ಚಾರ್ ಸೇರಿದಂತೆ ದೇಶದ ಹನ್ನೆರಡು ಪ್ರಮುಖ ಸ್ಥಳಗಳಲ್ಲಿ ಬೃಹತ್ ಆಚರಣೆಗಳು ನಡೆದಿವೆ.  ಜಾಗತಿಕ ಮಟ್ಟದಲ್ಲಿಯೂ ಈ ಆಚರಣೆ ವ್ಯಾಪಕವಾಗಿದ್ದು, ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ-ಐಸಿಸಿಆರ್ ಸಮನ್ವಯದೊಂದಿಗೆ ವಿದೇಶಗಳಲ್ಲಿರುವ ೨೧೦ಕ್ಕೂ ಹೆಚ್ಚು ಭಾರತೀಯ ರಾಯಭಾರ ಕಚೇರಿಗಳು ವಿಶ್ವದಾದ್ಯಂತ ಸುಮಾರು ೨ ಸಾವಿರದ ೫೦೦ ಸ್ಥಳಗಳಲ್ಲಿ ಯೋಗ ಕಾರ್ಯಕ್ರಮಗಳನ್ನು ಆಯೋಜಿಸಿವೆ.

**<>><><*><><<>**

೧೨ನೇ ಅಂತಾರಾಷ್ಟ್ರೀಯ ಯೋಗ ದಿನ ಹಿನ್ನೆಲೆ ಇಂದು ಕರ್ನಾಟಕದ ವಿಧಾನಸೌಧದ ಎದುರು ಆಯೋಜಿಸಲಾಗಿದ್ದ ರಾಜ್ಯಮಟ್ಟದ ಯೋಗದಿನಾಚರಣೆಯಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು. ಈ ವೇಳೆ ರಾಜ್ಯಪಾಲರು, ಯೋಗಾಸಕ್ತರೊಂದಿಗೆ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡರು. ಬೆಂಗಳೂರು ದೂರದರ್ಶನ ಕೇಂದ್ರದಲ್ಲೂ ಯೋಗ ದಿನಾಚರಣೆ ಆಯೋಜಿಸಲಾಗಿತ್ತು. ಕೇಂದ್ರ ಎಂಎಸ್‌ಎಂಇ ಹಾಗೂ ಕಾರ್ಮಿಕ ಮತ್ತು ಉದ್ಯೋಗ ಖಾತೆಗಳ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಯೋಗ ದಿನಾಚರಣೆಗೆ ಚಾಲನೆ ನೀಡಿದರು.

**<>><><*><><<>**

ಮಧ್ಯಪ್ರದೇಶದ ಜಬಲ್‌ಪುರದಲ್ಲಿ ಇಂದು ನಡೆದ ರಾಜ್ಯ ಮಟ್ಟದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಯೋಗ ದಿನದ ಆಚರಣೆಯ ನಂತರ, ರಾಷ್ಟ್ರಪತಿಗಳು ರಾಣಿ ದುರ್ಗಾವತಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಲಿದ್ದು, ಅಲ್ಲಿ ಆಯೋಜಿಸಲಾಗಿರುವ ವಿಶ್ವವಿದ್ಯಾಲಯದ ೩೬ನೇ ಘಟಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.  ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕುನೊ ರಾಷ್ಟ್ರೀಯ ಉದ್ಯಾನವನಕ್ಕೆ ಭೇಟಿ ನೀಡಲಿದ್ದಾರೆ. ಇದೇ ವೇಳೆ ಅವರು, ಸ್ಥಳೀಯ ಸಹಾರಿಯಾ ಬುಡಕಟ್ಟು ಸಮುದಾಯದ ಸದಸ್ಯರು, ಚೀತಾ ಉಸ್ತುವಾರಿ ಸಿಬ್ಬಂದಿ ಹಾಗೂ ಉದ್ಯಾನವನದ ಕ್ಷೇತ್ರ ಕಾರ್ಯಪಡೆಯ ಸಿಬ್ಬಂದಿಯೊಂದಿಗೆ ವಿಶೇಷ ಸಂವಾದ ನಡೆಸಲಿದ್ದಾರೆ.

**<>><><*><><<>**

ಅಂತಾರಾಷ್ಟ್ರೀಯ ಯೋಗ ದಿನದ ಮುನ್ನಾದಿನವಾದ ನಿನ್ನೆ ಹಲವಾರು ಪಾಶ್ಚಿಮಾತ್ಯ ದೇಶಗಳಲ್ಲಿ ಯೋಗಾಸಕ್ತರು ದೊಡ್ಡ ಸಂಖ್ಯೆಯಲ್ಲಿ ಒಟ್ಟುಗೂಡಿ ಯೋಗಾಭ್ಯಾಸ ನಡೆಸಿದ್ದಾರೆ. ಕೆನಡಾದ ಟೊರೊಂಟೊದಲ್ಲಿರುವ ಒಂಟಾರಿಯೊ ಶಾಸನಸಭೆಯ ಮುಂಭಾಗದಲ್ಲಿ ಸರ್ಕಾರಿ ಪ್ರತಿನಿಧಿಗಳು ಹಾಗೂ ರಾಜತಾಂತ್ರಿಕ ಅಧಿಕಾರಿಗಳು ಯೋಗ ಸಭೆಯಲ್ಲಿ ಪಾಲ್ಗೊಂಡಿದ್ದರು. ಬ್ರೆಜಿಲ್‌ನ ಭವ್ಯವಾದ ಫೋಜ್ ದೋ ಇಗುವಾಸ್ ಜಲಪಾತದ ಬಳಿ ಭಾರತದ ರಾಯಭಾರಿ ದಿನೇಶ್ ಭಾಟಿಯಾ ನೇತೃತ್ವದಲ್ಲಿ ವಿಶೇಷ ಯೋಗ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇತ್ತ ಡೆನ್ಮಾರ್ಕ್‌ನ ಆರ್ಹಸ್‌ನ ಡಾಕ್-೧ ನಲ್ಲಿ ನಡೆದ ಆಚರಣೆಯಲ್ಲಿ ರಾಯಭಾರಿ ಮನೀಶ್ ಪ್ರಭಾತ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸೆನ್ ಅವರಿಗೆ ಬರೆದಿದ್ದ ಪತ್ರವನ್ನು ವಾಚಿಸಿದರು. ಅಮೆರಿಕದ ವಾಷಿಂಗ್ಟನ್ ಡಿಸಿಯಲ್ಲಿರುವ ಐತಿಹಾಸಿಕ ಲಿಂಕನ್ ಮೆಮೋರಿಯಲ್ ಬಳಿ ನೂರಾರು ಜನರು ಒಟ್ಟಿಗೆ ಸೇರಿ ಯೋಗ ದಿನವನ್ನು ಆಚರಿಸಿದರು.

**<>><><*><><<>**

ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ-ನೀಟ್ ಯುಜಿ ಮರುಪರೀಕ್ಷೆ ಇಂದು ಮಧ್ಯಾಹ್ನ ಜರುಗಲಿದೆ. ಭಾರತದಾದ್ಯಂತ ೫೫೧ ನಗರಗಳಲ್ಲಿ ಹಾಗೂ ವಿದೇಶಗಳ ೧೪ ನಗರಗಳಲ್ಲಿ ಒಟ್ಟು ೨೨.೭೯ ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳಿಗಾಗಿ ಈ ಮರುಪರೀಕ್ಷೆಯನ್ನು ಆಯೋಜಿಸಲಾಗಿದೆ. ಈ ಪರೀಕ್ಷೆಯು ಮಧ್ಯಾಹ್ನ ೨ ಗಂಟೆಯಿಂದ ಸಂಜೆ ೫:೧೫ ರವರೆಗೆ ನಡೆಯಲಿದೆ. ಪ್ರಸ್ತುತ ಪರೀಕ್ಷೆಯನ್ನು ಇಂಗ್ಲಿಷ್ ಮತ್ತು ೧೨ ಭಾರತೀಯ ಭಾಷೆಗಳಲ್ಲಿ ನಡೆಸಲಾಗುತ್ತಿದೆ. ಪರೀಕ್ಷೆಯ ಮುನ್ನಾದಿನವಾದ ನಿನ್ನೆ, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ-ಎನ್‌ಟಿಎ ಜಾಮರ್‌ಗಳು, ಸಿಸಿಟಿವಿ, ತಪಾಸಣಾ ಸಿಬ್ಬಂದಿ ಹಾಗೂ ಬಯೋಮೆಟ್ರಿಕ್ಸ್ ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನು ವ್ಯವಸ್ಥಿತವಾಗಿ ಪರಿಶೀಲಿಸಲು ದೇಶಾದ್ಯಂತ ಅಣಕು ಪ್ರಕ್ರಿಯೆ ನಡೆಸಿದೆ. ಪರೀಕ್ಷೆಯನ್ನು ಅತ್ಯಂತ ಸುಗಮ, ನ್ಯಾಯಸಮ್ಮತ ಮತ್ತು ಪಾರದರ್ಶಕವಾಗಿ ನಡೆಸಲು ತಾನು ಸಂಪೂರ್ಣವಾಗಿ ಸಿದ್ಧವಾಗಿರುವುದಾಗಿ ಎನ್‌ಟಿಎ ತಿಳಿಸಿದೆ.

**<>><><*><><<>**

ಪ್ರಧಾನಿ ನರೇಂದ್ರ ಮೋದಿ ಅವರು ಕೊಲ್ಕತ್ತಾದಲ್ಲಿ ಇಂದು, ದೇಶೀಯ ನಿರ್ಮಿತ ಮೂರು ಯುದ್ಧನೌಕೆಗಳನ್ನು ಲೋಕಾರ್ಪಣೆಗೊಳಿಸಲಿದ್ದಾರೆ. ಐಎನ್‌ಎಸ್ 'ದುನಗಿರಿ' ನೌಕೆ ಬ್ರಹ್ಮೋಸ್ ಕ್ಷಿಪಣಿಯಿಂದ ಸುಸಜ್ಜಿತವಾಗಿದ್ದು, ಮಧ್ಯಮ ವ್ಯಾಪ್ತಿಯ ವಾಯು ರಕ್ಷಣಾ ವ್ಯವಸ್ಥೆ ಒಳಗೊಂಡಿದೆ. ಐಎನ್‌ಎಸ್ 'ಸಂಶೋಧಕ್' ನೌಕೆಯನ್ನು ಕರಾವಳಿಯ ಆಳ ನೀರಿನ ಜಲನಕ್ಷೆ ಕಾರ್ಯಾಚರಣೆಗೆ ಅನುಕೂಲವಾಗುವಂತೆ ರೂಪಿಸಲಾಗಿದೆ. ಐಎನ್‌ಎಸ್ 'ಅಗ್ರೇಯ' ನೌಕೆ, ಸಬ್‌ಮೆರಿನ್ ನಿರೋಧಕವಾಗಿದ್ದು, ಕರಾವಳಿ ರಕ್ಷಣೆಗೆ ರಾಕೆಟ್ ಲಾಂಚರ್‌ಗಳನ್ನು ಹೊಂದಿದೆ. ಈ ನೌಕೆಗಳಿಗೆ ಬೇಕಾದ ಶೇಕಡಾ ೭೫ಕ್ಕೂ ಅಧಿಕ ಪ್ರಮಾಣದ ಉಪಕರಣಗಳನ್ನು ೨೦೦ ಕ್ಕೂ ಅಧಿಕ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳಿಂದ ಪಡೆದು, ನಿರ್ಮಿಸಿರುವುದು ವಿಶೇಷವೆನಿಸಿದೆ.

**<>><><*><><<>**

ಕೆನಡಾದ ಟೊರೊಂಟೊದಲ್ಲಿ ನಡೆದ ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯದಲ್ಲಿ ಜರ್ಮನಿ ತಂಡ, ಐವರಿ ಕೋಸ್ಟ್ ಅನ್ನು ೨-೧ ಗೋಲುಗಳಿಂದ ಸೋಲಿಸಿ ಪಂದ್ಯಾವಳಿಯಲ್ಲಿ ನಾಕೌಟ್ ಹಂತದಲ್ಲಿ ಸ್ಥಾನ ಗಳಿಸಿತು. ಜರ್ಮನಿಯ ಪರವಾಗಿ, ಡೆನಿಜ್ ಉಂಡಾವ್ ಎರಡು ಗೋಲುಗಳನ್ನು ಗಳಿಸಿದರು. ಇಂದು ಕನ್ಸಾಸ್ ನಗರದಲ್ಲಿ ನಡೆದ

ಇಕ್ವೇಡರ್ ಮತ್ತು ಕ್ಯೂರಸಾವ್ ನಡುವಿನ ’ಇ’ ಗುಂಪಿನ ಪಂದ್ಯ ಯಾವುದೇ ಗೋಲುಗಳಿಲ್ಲದೆ ಡ್ರಾನಲ್ಲಿ ಅಂತ್ಯಗೊಂಡಿದೆ.

**<>><><*><><<>**

ಚೆನ್ನೈನ ಎಂಎ ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಭಾರತ ಮತ್ತು ಅಫ್ಘಾನಿಸ್ತಾನ ನಡುವಿನ ಏಕದಿನ ಕ್ರಿಕೆಟ್ ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ಅಫ್ಘಾನಿಸ್ತಾನ ವಿರುದ್ಧ ಭಾರತ, ೯ ವಿಕೆಟ್‌ಗಳ ಭರ್ಜರಿ ಜಯದೊಂದಿಗೆ ಸರಣಿಯನ್ನು ೩-೦ ಅಂತರದಲ್ಲಿ ಗೆದ್ದುಕೊಂಡಿದೆ. ನಿನ್ನೆ ನಡೆದ ಪಂದ್ಯದಲ್ಲಿ ಭಾರತ ಅಫ್ಘಾನಿಸ್ತಾನ ನೀಡಿದ ೨೧೯ ರನ್‌ಗಳ ಗುರಿಯನ್ನು ಕೇವಲ ೨೮.೪ ಓವರ್‌ಗಳಲ್ಲಿ ೧ ವಿಕೆಟ್ ನಷ್ಟಕ್ಕೆ ಕ್ರಮಿಸಿ ಗೆಲುವು ದಾಖಲಿಸಿತು.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>**